# ಬೆಂಗಳೂರು ಬಸ್ಸ್ ಪ್ರಯಾಣಿಕರ ವೇದಿಕೆ

#122/4, ಇನ್ಫ್ಯಾಂಟ್ರಿ ರಸ್ತೆ, ಬೆಂಗಳೂರು–560001; 9880495032, 9972903460, 9483950202

bbpvedike@gmail.com; https://www.facebook.com/bbpvedike

**ಗುಣಮಟ್ಟ, ಸಮರ್ಥ, ಸುರಕ್ಷಿತ, ವಿಶ್ವಾಸನೀಯ, ಸಮಗ್ರ, ಸ್ವಚ್ಛ ಹಾಗೂ ಕೈಗೆಟುಕುವ ದರಗಳಲ್ಲಿ ಬಸ್ ಪ್ರಯಾಣ ಸೌಲಭ್ಯವನ್ನು ಹಾಗೂ** ಪ್ರಯಾಣಿಕರ ಪ್ರತಿಕ್ರಿಯೆಯೊಂದಿಗೆ ಸೇವಾ ಯೋಜನೆ ಜನರಿಗೆ ಕಲ್ಪಿಸಿಕೊಡುವುದಾಗಿ ಬೆಂ.ಮ.ಸಾ.ನಿಗಮವು(B.M.T.C) ಧ್ಯೇಯವಾಕ್ಯವು ಭರವಸೆ ನೀಡುತ್ತದೆ.

**ಬಿ.ಬಿ.ಎಂ.ಪಿ ವ್ಯಾಪ್ತಿಯಿಡೀ ಬ್ಲ್ಯಾಕ್ ಬೋರ್ಡ್ ಬಸ್ಸ್ ಗಳು ಬೇಕಾಗಿದೆ!**

ಇತ್ತೀಚಿನ ದಿನಗಳಲ್ಲಿ ಬಸ್ ಪ್ರಯಾಣ ದರ ತೀವ್ರ ಪ್ರಮಾಣದಲ್ಲಿ ಹೆಚ್ಚಾಗಿದೆ. ಇಂತಹ ಸಂದರ್ಭದಲ್ಲಿ ಬ್ಲ್ಯಾಕ್ ಬೋರ್ಡ್–ರೆಡ್ ಬೋರ್ಡ್ ಎಂಬ ಹೆಸರಿನಲ್ಲಿ, ಅವೈಜ್ಞಾನಿಕವಾದ ದರಗಳಲ್ಲಿ ಬಸ್ ಪ್ರಯಾಣ ಸೇವೆಯನ್ನು ಅನುಷ್ಠಾನಗೊಳಿಸುವ ಮೂಲಕ ಬೆಂ.ಮ.ಸಾ.ನಿಗಮವು ಜನರಿಂದ ಮತ್ತಷ್ಟು ಹೆಚ್ಚು ಸುಲಿಗೆ ಮಾಡುತ್ತಿದೆ. ಬೆಂ.ನ.ಸಾ.ನಿಗಮವು ನಗರ ಪ್ರದೇಶಗಳ ವ್ಯಾಪ್ತಿಗಳಿಗೆಂದು ಬ್ಲ್ಯಾಕ್ ಬೋರ್ಡ್ ಬಸ್ಸುಗಳು ಮತ್ತು ನಗರದ ಹೊರವಲಯಗಳಿಗಾಗಿ ರೆಡ್ ಬೋರ್ಡ್ ಬಸ್ಸುಗಳ ಸೇವೆಗಳನ್ನು ಒದಗಿಸುತ್ತಿದೆ. ಈ ಎರಡೂ ಬಸ್ಸುಗಳ ಟಿಕೆಟ್ ದರಗಳು ಒಂದೇ ಆದರೂ ಇವುಗಳ ಮಾಸಿಕ ಪಾಸುಗಳ ದರಗಳಲ್ಲಿ ತೀವ್ರ ಪ್ರಮಾಣದ ವ್ಯತ್ಯಾಸವಿದೆ – ಬ್ಲ್ಯಾಕ್ ಬೋರ್ಡ್ ಬಸ್ಸುಗಳ ಮಾಸಿಕ ಪಾಸ್ ದರ ರೂ.725.00 ಆದರೆ, ರೆಡ್ ಬೋರ್ಡ್ ಬಸ್ಸುಗಳ ಮಾಸಿಕ ಪಾಸ್ ದರ ರೂ.925.00 ಎಂದು ನಿಗಧಿಪಡಿಸಿದೆ. ಆದರೆ ಇಲ್ಲಿ ಚರ್ಚಿಸಬೇಕಿರುವ ವಿಷಯವೆಂದರೆ ನಗರ ಪ್ರದೇಶದ ವ್ಯಾಪ್ತಿಯಲ್ಲಿರುವ ಲಿಂಗರಾಜಪುರಂ, ಭೂಪಸಂದ್ರ, ಇತ್ಯಾದಿಗಳಿಗೆ, ಕೇವಲ ರೆಡ್ ಬೋರ್ಡ್ ಬಸ್ಸುಗಳ ಸೇವೆ ಮಾತ್ರ ಒದಗಿಸಲಾಗುತ್ತಿದೆ! **ಹೀಗಾಗಿ ಈ ಬಡಾವಣೆಗಳಲ್ಲಿ ವಾಸಿಸುವ ಪ್ರಯಾಣಿಕರು ಪ್ರತಿಯೊಬ್ಬ ಪಾಸ್ ಹೊಂದಿರುವವರೂ ರೂ.200 ಹೆಚ್ಚಿನ ಹೊರೆಯನ್ನು ಹೊರಬೇಕಾಗಿದೆ.** ಈ ಬಗ್ಗೆ ನಮ್ಮ ವೇದಿಕೆ, ಬೆಂ.ಮ.ಸಾ.ನಿಗಮದ ಅಧಿಕಾರಿಗಳನ್ನು ಪ್ರಶ್ನಿಸಿದಾಗ, ರೆಡ್ ಬೋರ್ಡ್/ಬ್ಲ್ಯಾಕ್ ಬೋರ್ಡ್ ಬಸ್ ಸೇವೆಗಳನ್ನು ನಿಗಧಿಪಡಿಸಲು ಹಳೆಯ ಬಿಎಂಪಿ ಮಿತಿಯನ್ನೇ (225 ಚದರ ಕಿ.ಮೀ.) ಈಗಲೂ ಪಾಲಿಸುತ್ತಿರುವುದಾಗಿ ಕಾರಣ ನೀಡಿದರು! ಬಿ.ಬಿ.ಎಂ.ಪಿ ತನ್ನ ವಿಸ್ತಾರ ವ್ಯಾಪ್ತಿಯನ್ನು 700 ಚದರಡಿಗಳಿಗೆ ವಿಸ್ತರಿಸಿ ಈಗಾಗಲೇ 3 ವರ್ಷಗಳೇ ಕಳೆದಿವೆ. ಆದರೆ ಬೆಂ.ಮ.ಸಾ.ನಿಗಮವು ಈಗಲೂ ಈ ಹಳೆಯ ನಗರ ವ್ಯಾಪ್ತಿಗಳನ್ನೇ ಏಕೆ ಪಾಲಿಸುತ್ತಿದೆ ಎಂಬುದು ಆಶ್ಚರ್ಯಕರ ಸಂಗತಿ. ಕಳೆದ ಆಗಸ್ಟ್ ತಿಂಗಳಲ್ಲಿ ಬೆಂ.ಮ.ಸಾ.ನಿಗಮವು ಅಧಿಕಾರಿಗಳೊಂದಿಗೆ ನಡೆಸಿದ ಸಭೆಯಲ್ಲಿ ಬಿ.ಬಿ.ಎಂ.ಪಿ ವ್ಯಾಪ್ತಿಯ ಎಲ್ಲಾ ಬಡಾವಣೆಗಳಿಗೆ ಬಸ್ ಸೇವೆಗಳನ್ನು ವಿಸ್ತರಿಸುವಂತೆ ನಾವು ಮನವಿ ಮಾಡಿದ್ದೆವು. ಡಿಸೆಂಬರ್ 04 2013 ರಂದು ಈ ಬಗ್ಗೆ ಪ್ರತಿಭಟನೆ ಕೈಗೊಂಡಾಗ ಬಿ.ಎಂ.ಟಿ.ಸಿ ಅಧಿಕಾರಿಗಳೂ ಈ ಬಗ್ಗೆ ಸಭೆಯನ್ನು ಕರೆಯುವುದಾಗಿ ಆಶ್ವಾಸನೆ ಕೊಟ್ಟರು. ಆದರೆ ಈವರೆವಿಗೂ ಈ ಬಗ್ಗೆ ಯಾವುದೇ ಕ್ರಮಗಳನ್ನು ಕೈಗೊಂಡಿಲ್ಲ. ಬೆಂ.ಮ.ಸಾ.ನಿಗಮದ ಅದಕ್ಷತೆಗೆ ನಾವೇಕೆ ಹೆಚ್ಚು ಹಣ ಪಾವತಿಸಬೇಕು? ಸಾರಿಗೆ ನಿಗಮ ಜನರ ತೊಳಲಾಟವನ್ನು ಅರಿಯಲಾರದಷ್ಟು ಅಸಂವೇದಿಯೇ?

ಪ್ರಯಾಣಿಕರ ದನಿಯನ್ನು ಆಲಿಸಿ ಅವರ ಕಷ್ಟಗಳಿಗೆ ಸ್ಪಂದಿಸುವುದಕ್ಕೆ ಗುಣಮಟ್ಟ ವ್ಯವಸ್ಥೆಯೊಂದನ್ನು ಬೆಂ.ಮ.ಸಾ.ನಿ ಜಾರಿಗೆ ತಂದಿದ್ದರೆ, ಈವತ್ತು ಈ ಸಮಸ್ಯೆ ನಮ್ಮ ಮುಂದೆ ಇರತಿರಲಿಲ್ಲ. ಇಂತಹ ಸಮಸ್ಯೆಗಳನ್ನು ಪರಿಹರಿಸುವುದಕ್ಕಾಗಿಯೇ ಪ್ರಯಾಣಿಕರ ಸಮಿತಿಯನ್ನೂ ಹೊಂದಿರುವುದಾಗಿ ಬೆಂ.ಮ.ಸಾ.ನಿಗಮವು ಹೇಳಿಕೊಳ್ಳುತ್ತದೆ. ಇಂತಹ ಸಮಿತಿಯಿರುವುದು ಯಾರಿಗಾದರೂ ತಿಳಿದಿದೆಯೇ? ಇದ್ದರೆ ಈ ಸಮಿತಿಯ ಸದಸ್ಯರ್ಯಾರು? ಈ ಸಮಿತಿಯ ಸದಸ್ಯರು ಸಾರಿಗೆ ನಿಗಮದ ಬಸ್ಸುಗಳಲ್ಲಿ ಪ್ರಯಾಣಿಸುತ್ತಾರೆಯೇ? ಈ ಸಂಬಂಧ, ಪ್ರಯಾಣಿಕರ ಸಮಸ್ಯೆಗಳನ್ನು ಆಲಿಸಲು ಸಭೆಗಳನ್ನಾದರೂ ನಡೆಸುವಂತೆ ನಾವು ಮಾಡಿದ ಮನವಿಗೆ ಸಾರಿಗೆ ನಿಗಮವು ಪೂರಕವಾಗಿ ಸ್ಪಂದಿಸಲಿಲ್ಲ.

ಈ ಜನ–ವಿರೋಧಿ ನೀತಿಗಳನ್ನು ವಿರೋಧಿಸಿ ಈ ತಿಂಗಳ 'ಬಸ್ ದಿನ'ದಂದು 'ಕಪ್ಪು ದಿನ'ವನ್ನಾಗಿ ಆಚರಿಸಲು ನಾವು ನಿರ್ಧರಿಸಿದ್ದೇವೆ.

**ನಮ್ಮ ಬೇಡಿಕೆಗಳು ಹೀಗಿವೆ:**

1) ಬಿ.ಬಿ.ಎಂ.ಪಿ ಪ್ರದೇಶ ವ್ಯಾಪ್ತಿಯಲ್ಲಿರುವ ಎಲ್ಲಾ ಬಡಾವಣೆಗಳಿಗೆ ಬ್ಲ್ಯಾಕ್ ಬೋರ್ಡ್ ಬಸ್ಸುಗಳ ಸೇವೆಗಳನ್ನು ಒದಗಿಸಬೇಕು. ಪಾಲಿಕೆ ವ್ಯಾಪ್ತಿ ಒಳಗಿನ ಎಲ್ಲಾ ಪ್ರದೇಶಗಳ ಬಸ್ ಸ್ಟಾಪ್ ಗಳಿಗೆ ಬ್ಲ್ಯಾಕ್ ಬೋರ್ಡ್ ಸೇವೆ ಇರಬೇಕು.
2) ಮಹಿಳೆಯರು, ಕಾರ್ಮಿಕರು, ಮಕ್ಕಳು, ಹಿರಿಯ ನಾಗರೀಕರು, ಲೈಂಗಿಕ ಹಾಗು ಲಿಂಗತ್ವ ಅಲ್ಪಸಂಖ್ಯಾತರು, ಬೀದಿ ವ್ಯಾಪರಿಗಳು, ಸ್ಲಮ್ ನಿವಾಸಿಗಳ ಒಕ್ಕೂಟಗಳು ಹಾಗೂ ಬಸ್ಸುಗಳಲ್ಲಿ ಪ್ರಯಾಣಿಸುವ ಇತರೆ ಜನರು ಸದಸ್ಯರಾಗಿರುವ ನಗರ ಮಟ್ಟದ ಪ್ರಯಾಣಿಕರ ಸಮಿತಿಯನ್ನು ಬೆಂ.ಮ.ಸಾ.ನಿಗಮವು ಕೂಡಲೇ ರಚಿಸಬೇಕು.
3) ಬೆಂ.ಮ.ಸಾ.ನಿಗಮವು ಇನ್ನು ಮುಂದೆ ತಿಂಗಳಿಗೊಮ್ಮೆ **'ಬಸ್ಸ್ ಪ್ರಯಾಣಿಕರ ದಿವಸ'** ವನ್ನು ಆಚರಿಸಿ, ಆ ದಿವಸದಂದು ಪ್ರತಿ ಬಸ್ಸ್ ನಿಲ್ದಾಣದಲ್ಲಿ, ಟಿ.ಟಿ.ಎಂ.ಸಿ ಯಲ್ಲಿ, ಬಸ್ಸ್ ಡಿಪೋದಲ್ಲಿ ನಿಗಮದ ಅಧಿಕಾರಿಗಳು ಬಸ್ಸ್ ಪ್ರಯಾಣಿಕರ ಕ ಕಷ್ಟಗಳು ಕೇಳಿಸಿಕೊಳ್ಳಲ್ಲು, ನಮ್ಮ ಸಲಹೆಗಳನ್ನು ಕೇಳಿಸಿಕೊಳ್ಳಲು ವ್ಯವಸ್ತೆ ಏರ್ಪಡಿಸಬೇಕು.

**ನಮ್ಮೊಂದಿಗೆ ನೀವು ನಿಮ್ಮ ದನಿಯನ್ನು ಸೇರಿಸಿ!**

**ಶಿವಾಜಿನಗರ ಹಾಗು ಹೆಬ್ಬಾಳ ಬಸ್ ನಿಲ್ದಾಣದಲ್ಲಿ, ಡಿಸೆಂಬರ್ 4, ಸಂಜೆ 4.30ಕ್ಕೆ**

---

**ಸದಸ್ಯ ಸಂಸ್ಥೆಗಳು:** ಪರ್ಯಾಯ ಕಾನೂನು ವೇದಿಕೆ, ಬೆಂಗಳೂರು ಕೊಳಗೇರಿ ಜನರ ಸಂಘಟನೆ, ದಲಿತ ಬಹುಜನ ಚಳವಳಿ, ಈಕ್ವೇಷನ್ಸ್, ಫೆಡಿನಾ, ಗಾರ್ಮೆಂಟ್ ಹಾಗೂ ಟೆಕ್ಸ್‌ಟೈಲ್ ಕಾರ್ಮಿಕರ ಸಂಘ, ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, ಹಸಿರು ಉಸಿರು, ಜಟಕಾ ಜ್ಯೋತಿ ಮಹಿಳಾ ಸಂಘ, ಕರ್ನಾಟಕ ಡೊಮೆಸ್ಟಿಕ್ ವರ್ಕರ್ಸ್ ಯೂನಿಯನ್, ಕರ್ನಾಟಕ ಜನ ಶಕ್ತಿ, ಕರ್ನಾಟಕ ಲೈಂಗಿಕ ಅಲ್ಪಸಂಖ್ಯಾತರ ವೇದಿಕೆ, ಕರ್ನಾಟಕ ಲೈಂಗಿಕ ಕಾರ್ಮಿಕರ ಸಂಘ, ಮರಾ, ಮಿಲನ, ನ್ಯಾಷನಲ್ ಅಲೈಯನ್ಸ್ ಆಫ್ ಪೀಪಲ್ಸ್ ಮೂವ್‌ಮೆಂಟ್ಸ್, ನ್ಯೂ ಸೋಷಿಯಲಿಸ್ಟ್ ಆಲ್ಟರ್‌ನೇಟಿವ್, ಪ್ರಜಾ ರಾಜಕೀಯ ವೇದಿಕೆ, ರೇಡಿಯೋ ಆ್ಯಕ್ಟಿವ್ 90.4, ಸಂವಾದ, ಸಾಧನ ಮಹಿಳಾ ಸಂಘ, ಸಮಾನತಾ ಮಹಿಳಾ ವೇದಿಕೆ, ಸಮರ, ವಿಮೋಚನ, ವಿಜಯನಗರ ಬೀದಿ ವ್ಯಾಪಾರಿಗಳ ಸಂಘಟನೆ, ವರ್ಡ್ ವಿಷನ್ ಇಂಡಿಯಾ